**ದಿನಾಂಕಃ 14.03.2023**

**ಓ.ಎಸ್ ಃ 97/2020**

**ಪಿ. ಡಬ್ಲ್ಯೂ ಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಸ್.ಜೆ. ರವರಿಂದ ಃ**

1. ನಾನು ಬಿ.ಕಾಂ., ಓದಿರುತ್ತೇನೆ ಆದರೆ ಪದವಿ ಮುಗಿಸಿರುವುದಿಲ್ಲ. ನಾನು ವಿದ್ಯಾಭ್ಯಾಸವನ್ನು 4 ವರ್ಷದ ಹಿಂದೆ ನಿಲ್ಲಿಸಿರುತ್ತೇನೆ. 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಭಾಗ್ಯಮ್ಮ ಎಂದರೆ ಸರಿ. ಅವರ ತಾಯಿಯ ಹೆಸರು ಚೌಡಮ್ಮ ಎಂದರೆ ಸರಿ. ಚೌಡಮ್ಮನ ಒಡಹುಟ್ಟಿದವರು ಇಬ್ಬರು ಎಂದರೆ ಸರಿ. ಅವರುಗಳು ಕುಳ್ಳಮ್ಮ ಮತ್ತು ಸಣ್ಣಮ್ಮ ಸಹೋದರಿಯರು ಎಂದರೆ ಸರಿ. ಇವರುಗಳ ತಂದೆ ತಾಯಿ ಕುಳ್ಳೇಗೌಡ ಮತ್ತು ನಿಂಗಮ್ಮ ಉಃ ಚೌಡಮ್ಮ ಎಂದರೆ ಸರಿ. ನನ್ನ ಅತ್ತೆಯ ಚಿಕ್ಕಮ್ಮನಾದ ಸಣ್ಣಮ್ಮ ರವರ ಗಂಡನ ಹೆಸರು ಲಿಂಗಯ್ಯ ಎಂದರೆ ಸರಿ. ಲಿಂಗಯ್ಯನವರ ಸಹೋದರನ ಹೆಸರು ರಾಮಣ್ಣ ಎಂದರೆ ನನಗೆ ಗೊತ್ತಿಲ್ಲ. ಸರೋಜಮ್ಮನ ಗಂಡನ ರಾಮಣ್ಣ ಎಂದರೆ ನನಗೆ ಗೊತ್ತಿಲ್ಲ. ರಾಮಣ್ಣನ ಹೆಂಡತಿ ಸರೋಜಮ್ಮ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಗಾಯಿತ್ರಿ ರವರ ಒಡಹುಟ್ಟಿದವರು ಸರೋಜಮ್ಮ, ಸತೀಶ್ ಮತ್ತು ಶೈಲೇಂದ್ರ. ನನ್ನ ತಾಯಿಯ ಅಕ್ಕ ಸರೋಜಮ್ಮ ಅವರೇ ಲಿಂಗಯ್ಯನ ತಮ್ಮ ರಾಮಣ್ಣ ನವರ ಹೆಂಡತಿ ಎಂದರೆ ಸಾಕ್ಷಿಯು ನನ್ನ ತಾಯಿಯ ಅಕ್ಕ ಸರೋಜಮ್ಮ ರವರ ಗಂಡನ ಹೆಸರು ರಾಮಣ್ಣ ಎಂದು ನುಡಿಯುತ್ತಾರೆ.

2. ನನ್ನ ಅತ್ತೆಯ ಚಿಕ್ಕಮ್ಮಳಾದ ಸಣ್ಣಮ್ಮಳ ಮೈದುನನೇ ಸರೋಜಮ್ಮನ ಗಂಡ ರಾಮಣ್ಣ ಎಂದರೆ ಸರಿಯಲ್ಲ. ನನ್ನ ಅತ್ತೆಯ ಚಿಕ್ಕಮ್ಮಳಾದ ಸಣ್ಣಮ್ಮ ಮತ್ತು ನನ್ನ ದೊಡ್ಡಮ್ಮ ಸರೋಜಮ್ಮ ಇಬ್ಬರೂ ವಾರಗಿತ್ತಿ ಆಗುತ್ತಾರೆ ಎಂದರೆ ಸರಿಯಲ್ಲ. ಸರೋಜಮ್ಮಳಿಗೆ ನಾನು ತಂಗಿಯ ಮಗಳು ಎಂದರೆ ಸರಿ. ಆಗಾಗಿ ನಾನು ಮತ್ತು ನನ್ನ ಅತ್ತೆ ಭಾಗ್ಯಮ್ಮ ದೊಡ್ಡಮ್ಮ ಚಿಕ್ಕಮ್ಮನ ಮಕ್ಕಳು ಅಂದರೆ ಸಂಬಂಧದಲ್ಲಿ ಅಕ್ಕ ತಂಗಿಯರು ಆಗುತ್ತೇವೆ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿ ತಿಮ್ಮೇಗೌಡರವರಿಗೆ 3 ಜನ ಮಕ್ಕಳು. ಅವರ ಹೆಸರುಗಳು ಪುಟ್ಟಸ್ವಾಮಿ, ಪುನೀತ್ ಮತ್ತು ವೆಂಕಟೇಶ್. ಭಾಗ್ಯಮ್ಮನವರ 2ನೇ ಮಗ ಸಂಬಂಧದಲ್ಲಿ ನನಗೆ ಮಗ ಆಗಬೇಕು ಎಂದರೆ ಸರಿಯಲ್ಲ. ನಾನು ಅವರಿಗೆ ಸಂಬಂಧದಲ್ಲಿ ಚಿಕ್ಕಮ್ಮ ಆಗಬೇಕು ಎಂದರೆ ಸರಿಯಲ್ಲ. ಅಪ್ರಾಪ್ತ ವಾದಿಗೆ ನಾನು ನೈಸರ್ಗಿಕ ಪೋಷಕರಾಗಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅಪ್ರಾಪ್ತ ವಾದಿಯ ಪರವಾಗಿ ದಾವೆ ಹೂಡಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪುನೀತ್, ಭಾಗಮ್ಮ, ಸರೋಜಮ್ಮ ನವರ ಸಂಬಂಧದ ಬಗ್ಗೆ ವಾದ ಪತ್ರದಲ್ಲಿ ಹೇಳಿರುತ್ತೇನಾ ಎಂದರೆ ಸಾಕ್ಷಿಯು ಸರೋಜಮ್ಮ ನವರ

ಬಗ್ಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ದೊಡ್ಡಮ್ಮ ಸರೋಜಮ್ಮನ ಬಗ್ಗೆ ವಾದ ಪತ್ರದಲ್ಲಿ ಹೇಳಿದರೆ ನನಗೆ ತೊಂದರೆಯಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಅದನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಇರುವ ವಂಶವೃಕ್ಷ ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಎಲ್ಲ ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿಯು ಮನೆಯ ಯಜಮಾನಿಕೆಯನ್ನು ಮಾಡುತ್ತಾರೆ ಮತ್ತು ತಿಂಗಳಿಗೆ 1 ಲಕ್ಷದ 20 ಸಾವಿರ ರೂ. ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಎಲ್ಲ ಬಾಡಿಗೆ ಮನೆಗಳು ಮತ್ತು ವಾಣಿಜ್ಯ ಮಳಿಗೆಗಳಾಗಿದ್ದು ಅದರಿಂದ ಬಾಡಿಗೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ವಾದಿಗಳನ್ನು ನಿರ್ಲಕ್ಷ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುನೀತ್ ಕುಮಾರ್ ಮರಣ ಹೊಂದಿದ ನಂತರ ಪ್ರತಿವಾದಿಗಳು ನಮ್ಮನ್ನು ನಿರ್ಲಕ್ಷ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಬೌತಿಕವಾಗಿ ಮತ್ತು ಮಾನಸಿಕವಾಗಿ ನನಗೆ ಹಿಂಸೆ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿ ನಾವು ಪ್ರತ್ಯೇಕವಾಗಿ ವಾಸವಾಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ನನ್ನ ತಂದೆ ಮನೆಯಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.